## ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಪಾಂಡವಪುರ

**ಸಿಸಿ.ನಂ. 176/2020**

| | | |
|---|---|---|
| ಸಾಕ್ಷಿದಾರರು | ಎಂ ಮಂಜುನಾಥ್ | ಸಿ.ಡಬ್ಲ್ಯೂ 22 |
| ತಂದೆ ಹೆಸರು | ಎಂ ಮಾದು | ಪಿ.ಡಬ್ಲ್ಯೂ 14 |
| ವಯಸ್ಸು | 54 ವರ್ಷ | |
| ವೃತ್ತಿ | ಪೊಲೀಸ್ ನಿರೀಕ್ಷಕರು, ಮಹಿಳಾ ಪೊಲೀಸ್ ಠಾಣೆ, ಕೊಡಗು | |
| ವಾಸ ಸ್ಥಳ | ಮಡಿಕೇರಿ | |

**ಸಾಕ್ಷಿಯನ್ನು ದಿ. 06.10.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ**

ನಾನು ದಿಃ 30.04.2009 ರಿಂದ 02.06.2011 ರವರೆಗೆ ಪಾಂಡವಪುರ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 12.05.2011 ರಂದು ಈ ಪ್ರಕರಣದ ಕಡತವನ್ನು ಚಾಸಾ.21 ರವರಿಂದ ಪಡೆದು ತನಿಖೆ ಮುಂದುವರಿಸಿ, ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಚಾಸಾ.1 ರವರು ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ.3 ಮತ್ತು 4 ರವರ ಸಮಕ್ಷಮ ಕೃತ್ಯ ಸ್ಥಳದ ಮಹಜರು ಕ್ರಮ ಜರುಗಿಸಿದೆನು. ಸದರಿ ಪಂಚನಾಮೆಯನ್ನು ಈಗಾಗಲೆ ನಿಪಿ.2

ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2 ಸಿ ಎಂದು ಗುರುತಿಸಲಾಯಿತು. ನಂತರ ಕಡತವನ್ನು ಚಾಸಾ.23 ರವರಿಗೆ ಹಸ್ತಾಂತರಿಸಿದೆನು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

2. ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದರಿಂದ ತನಿಖೆ ಮಾಡಿದೆನು. ದಿಃ 12.05.2011 ರಂದು ಸ್ಥಳಕ್ಕೆ ಹೋದೆನು. ಪಂಚನಾಮೆ ಮಾಡಿಸುವಾಗ ಫೋಟೋ ತೆಗೆಸಿಲ್ಲ. ನಿಪಿ.2 ನ್ನು ನಮ್ಮ ಸಿಬ್ಬಂದಿ ಕೈ ಬರವಣಿಗೆಯಲ್ಲಿ ನಾನೇ ಉಕ್ತ ಲೇಖನ ಕೊಟ್ಟು ಬರೆಸಿರುತ್ತೇನೆ. ಆ ವಾಸದ ಮನೆಯ ಬಾಗಿಲನ್ನು ಮೀಟಿದ್ದರು ಎಂದು ತೋರಿಸಲು ಯಾವುದೇ ಫೋಟೋ ಮತ್ತು ವಿಡಿಯೋ ಹಾಜರು ಪಡಿಸಿಲ್ಲ ಎಂದರೆ ಸರಿ. ನಿಪಿ.2 ನ್ನು ಠಾಣೆಯಲ್ಲಿ ಸೃಷ್ಟಿಸಿರುತ್ತೀರಾ ಎಂದರೆ ಸರಿಯಲ್ಲ. ಪಂಚರಿಗೆ ನೋಟೀಸು ನೀಡಿಲ್ಲ ಎಂದರೆ ಸರಿ. ಚಾಸಾ.1 ರವರ ದೂರಿಗೆ ಪೂರಕವಾಗಿ ನಡೆಸಿರುತ್ತೀರಾ ಎಂದರೆ ಸರಿಯಲ್ಲ. ನೀವು ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).**

**ಸಾ.ಓ.ಹೇ.ಕೆ.ಸ.ಇ.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.**